ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಸಂಖ್ಯೆ:–ಕೆ–2/ಎನ್.ಎಸ್.ಕ್ಯೂ.ಎಫ್/ಪರೀಕ್ಷೆ–01/2022–23 ದಿನಾಂಕ: 15–03–2023

## ಸುತ್ತೋಲೆ

ವಿಷಯ:–2023ರ ಎನ್.ಎಸ್.ಕ್ಯೂ.ಎಫ್‌ನ ಹಂತ–01ರ ಪರೀಕ್ಷೆಯನ್ನು ಶಾಲಾ ಹಂತದಲ್ಲಿ ನಡೆಸುವ ಬಗ್ಗೆ

ಉಲ್ಲೇಖ:–1) ಮಂಡಲಿಯ ಅಧಿಸೂಚನೆ ಸಂಖ್ಯೆ: ಕೆ3/ಎನ್.ಎಸ್.ಕ್ಯೂ.ಎಫ್ ಅಧಿಸೂಚನೆ/ಮಾರ್ಚ್–2022/2021–22, ದಿನಾಂಕ:18/01/2022

******************

ಎನ್.ಎಸ್.ಕ್ಯೂ.ಎಫ್‌ನ ಹಂತ–01ರ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಪರೀಕ್ಷೆಗಳನ್ನು ಈ ವರ್ಷದಿಂದ ಶಾಲಾ ಹಂತದಲ್ಲಿಯೇ ನಡೆಸಲು ಈಗಾಗಲೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಮಂಡಳಿಯಿಂದ ಮಾದರಿ ಪ್ರಶ್ನೆ ಪತ್ರಿಕೆಯನ್ನು ಸಿದ್ದಪಡಿಸಿ ದಿನಾಂಕ: 15–03–2023 ರಂದು ಮಂಡಳಿಯ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗುವುದು. ಅದರಂತೆ ನಿಮ್ಮ ಜಿಲ್ಲಾ ವ್ಯಾಪ್ತಿಯ ಎನ್‌ಎಸ್‌ಕ್ಯೂಎಫ್ ಅಳವಡಿತ ಶಾಲೆಗಳ ಮುಖ್ಯ ಶಿಕ್ಷಕರು ಶಾಲಾ ಹಂತದಲ್ಲಿ ಪ್ರಶ್ನೆ ಪತ್ರಿಕೆಯನ್ನು ರಚಿಸಿಕೊಂಡು, ನೀವು ಸೂಚಿಸುವ ದಿನಾಂಕದಂದು ಪರೀಕ್ಷೆ ನಡೆಸಲು ಕ್ರಮಕೈಗೊಳ್ಳುವುದು.

ಹಂತ–01ರ 9ನೇ ತರಗತಿ ವಿದ್ಯಾರ್ಥಿಗಳು ಸೈದ್ಧಾಂತಿಕ ಆಂತರಿಕ ಮೌಲ್ಯಮಾಪನ ಹಾಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಮಾಹಿತಿಯನ್ನು ಶಾಲಾ ಹಂತದಲ್ಲಿಯೇ ಸಿದ್ದಪಡಿಸಿಕೊಳ್ಳುವುದು.

ಎನ್‌ಎಸ್‌ಕ್ಯೂಎಫ್ ಅಳವಡಿತ ಶಾಲೆಗಳಿಗೆ ಪರೀಕ್ಷಾ ಸಮಯದಲ್ಲಿ ಯಾವುದೇ ಲೋಪದೋಷಗಳುಂಟಾಗದಮತೆ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಉಪನಿರ್ದೇಶಕರು ಶಾಲಾ ಮುಖ್ಯ ಶಿಕ್ಷಕರಿಗೆ ನಿರ್ದೇಶನ ನೀಡಿ ಪರೀಕ್ಷೆಯನ್ನು ನಡೆಸಿದ ಬಗ್ಗೆ ಮಂಡಳಿಗೆ ವರದಿ ಮಾಡುವಂತೆ ಈ ಮೂಲಕ ತಿಳಿಸಿದೆ.

(ಗೋಪಾಲಕೃಷ್ಣ.ಎಚ್.ಎನ್) 15/3/2023
ನಿರ್ದೇಶಕರು (ಪರೀಕ್ಷೆಗಳು)
15/3/23

ಗೆ, ಎಲ್ಲಾ ಉಪನಿರ್ದೇಶಕರು(ಆಡಳಿತ)

---

ಪ್ರತಿಯನ್ನು:–

1. ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಆದರ ಪೂರ್ವಕವಾಗಿ.
2. ಹೆಚ್ಚುವರಿ ಆಯುಕ್ತರು, ಧಾರವಾಡ/ಕಲುಬುರ್ಗಿ(ಪರಿಶೀಲನಾ ಶಾಖೆಗಳ ಮುಖೇನ) ಇವರಿಗೆ ಆದರ ಪೂರ್ವಕವಾಗಿ.
3. ನಿರ್ದೇಶಕರು ಆರ್.ಎಂ.ಎಸ್.ಎ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ.(ಪರಿಶೀಲನಾ ಶಾಖೆಗಳ ಮುಖೇನ).
5. ರಾಜ್ಯದ ಜಿಲ್ಲಾ ಉಪನಿರ್ದೇಶಕರು(ಅಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮುಖೇನ).
6. ರಾಜ್ಯದ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮುಖೇನ).
7. ರಾಜ್ಯದ ಎಲ್ಲಾ ಎನ್.ಎಸ್.ಕ್ಯೂ.ಎಫ್ ಶಾಲೆಗಳ ಮುಖ್ಯಸ್ಥರುಗಳಿಗೆ(ಪರಿಶೀಲನಾ ಶಾಖೆಗಳ ಮುಖೇನ).